**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.ನಂ.**2554/2024**
ದಿನಾಂಕಃ **12.12.2024**

ಪಿರ್ಯಾದಿ ಃ ಶ್ರೀ ದರ್ಶನ ಬಿ. ಬಂಗೇರ
ಬಿನ್ ಭಗೀರಥ ಕೆ.,
ಸುಮಾರು 37 ವರ್ಷ, ವ್ಯವಹಾರ,
ವಾಸಃ ಮೈಲಾರೇಶ್ವರ ನಿಲಯ,
ಪೋಸ್ಟ್ ಆಫೀಸ್ ಹತ್ತಿರ, ರೈಲ್ವೆ ಸ್ಟೇಷನ್
ರಸ್ತೆ, ಬೀರೂರು ಟೌನ್, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ ಃ ಶ್ರೀ ಭರತ್ ಆರ್.ಡಿ.
ಬಿನ್ ದೇವರಾಜ್,
ಸುಮಾರು 32 ವರ್ಷ, ವ್ಯವಹಾರ,
ವಾಸಃ ರೈಲ್ವೆ ಸ್ಟೇಷನ್ ರಸ್ತೆ,
ಬೀರೂರು ಟೌನ್, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶಃ

ಫಿರ್ಯಾದುದಾರರು ಮತ್ತು ಆರೋಪಿಯಾದ ನೀವು ಪರಿಚಿತರಿದ್ದು, ಆರೋಪಿಯಾದ ನೀವು ನಿಮ್ಮ ಗೃಹಕೃತ್ಯದ ಅವಶ್ಯತೆಗೋಸ್ಕರ ಫಿರ್ಯಾದುದಾರರಿಂದ ರೂ.6,84,500/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು ದಿನಾಂಕ 10.03.2024 ರಂದು ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್, ಕಡೂರು ಶಾಖೆಯ ಚೆಕ್ ಸಂಖ್ಯೆಃ 000003 ಅನ್ನು ರೂ.6,84,500/- ಗಳಿಗೆ ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬೀರೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲ" ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 13.05.2024

ರಂದು ನೋಟಿಸನ್ನು ಜಾರಿಗೊಳಿಸಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 15.05.2024 ರಂದು ಜಾರಿಯಾಗಿದ್ದು ನೀವು ಸುಳ್ಳು ಉತ್ತರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿಸಿರುವುದಿಲ್ಲ, ಆದುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

**1)** ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ**?**

ಉತ್ತರಃ ಹೌದು

**2)** ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯೇ**?**

ಪ್ರತಿರಕ್ಷೆ ಸಾಕ್ಷಿ ಇದೆ.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ತಾಹಾಕಲೀಲ್ ಕೆ.ಎ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ